# ಹನುಮ: ಭಕ್ತಿ–ಶಕ್ತಿ

ಪದ್ಮರಾಜ ದಂಡಾವತಿಯವರು ಕನ್ನಡಕ್ಕೆ ತಂದಿರುವ ದೇವದತ್ತ ಪಟ್ಟನಾಯಕರ 'ಸೀತಾ' ಕೃತಿಯಲ್ಲಿ 'ಹನುಮಂತನ ರಾಮಾಯಣ' ಎನ್ನುವ ಒಂದು ಅಪೂರ್ವ ಪ್ರಸಂಗವಿದೆ. ವಾಲ್ಮೀಕಿಯ ರಾಮಾಯಣ ಕಾವ್ಯವನ್ನು ಕೇಳಿದ ನಾರದರು, 'ಇದು ಚೆನ್ನಾಗಿದೆ. ಆದರೆ, ಹನುಮಂತನ ರಾಮಾಯಣ ಇನ್ನೂ ಚೆನ್ನಾಗಿದೆ' ಎಂದರಂತೆ. ಇದರಿಂದ ಹನುಮಂತನ ರಾಮಾಯಣದ ಬಗ್ಗೆ ಕುತೂಹಲ ತಾಳಿದ ವಾಲ್ಮೀಕಿ, ಹನುಮನನ್ನು ಭೇಟಿಯಾಗಿ ಆತ ಬರೆದ ರಾಮಾಯಣವನ್ನು ಓದಿದರಂತೆ. ಏಳು ಬಾಳೆಯೆಲೆಗಳ ಮೇಲೆ ಬರೆದ ಆ ಕಾವ್ಯವನ್ನು ಓದಿದ ವಾಲ್ಮೀಕಿ ಅಳತೊಡಗಿದರಂತೆ. ಹನುಮಂತನ ರಾಮಾಯಣವನ್ನು ಓದಿದ ಮೇಲೆ ಯಾರೂ ತನ್ನ ಕಾವ್ಯವನ್ನು ಓದುವುದಿಲ್ಲ ಎನ್ನುವುದವರ ದುಃಖ. ಮಹರ್ಷಿಗೂ ಕೀರ್ತಿಮೋಹವೆ? ಮಹರ್ಷಿಗಳ ಅಳುವನ್ನು ನೋಡಿದ ಹನುಮಂತ, ಕ್ಷಣಮಾತ್ರವೂ ಯೋಚಿಸದೆ ತಾನು ಕಾವ್ಯರಚಿಸಿದ್ದ ಬಾಳೆಯೆಲೆಗಳನ್ನು ಹರಿದುಹಾಕಿದನಂತೆ. ಗಾಬರಿಯಾದ ವಾಲ್ಮೀಕಿಗೆ, 'ಈಗ ಹನುಮಂತನ ರಾಮಾಯಣವನ್ನು ಯಾರೂ ಓದುವುದಿಲ್ಲ' ಎಂದು ಹನುಮ ಹೇಳಿದನಂತೆ.

'ಹನುಮಂತನ ರಾಮಾಯಣ'ದ ಪ್ರಸಂಗ, ರಾಮಕಥೆಯ ಕವಿಯಾಗಿ ಗುರ್ತಿಸಿಕೊಳ್ಳುವುದಕ್ಕಿಂತಲೂ ಹೃದಯದೊಂದಿಗೆ ರಾಮನನ್ನು ಬೆಸೆದುಕೊಳ್ಳುವುದು ಮುಖ್ಯವೆನ್ನುವ ಅರಿವು ಹಾಗೂ ಕೀರ್ತಿಗಿಂತಲೂ ಭಕ್ತಿ ಮಿಗಿಲೆನ್ನುವ ತಿಳಿವು ಹನುಮನಿಗಿದ್ದುದನ್ನು ಸೂಚಿಸುವಂತಿದೆ.

ರಾಮದೂತನಾಗಿ ಸಮುದ್ರವನ್ನು ಲಂಘಿಸಿ ಲಂಕೆಗೆ ಹಾರುವ ಪ್ರಸಂಗವೂ ಹನುಮನ ವ್ಯಕ್ತಿತ್ವದ ಘನ ವಿನಯವನ್ನು ಮನದಟ್ಟು ಮಾಡುವಂತಿದೆ. ಹಲವು ಯೋಜನ ವಿಸ್ತಾರದ ಬೃಹತ್ ಕಡಲನ್ನು ದಾಟುವುದು ಹೇಗೆ? ಹಾರುವ ಉಪಾಯ ತಿಳಿಯದೆ ವಾನರಸೇನೆ ಕಂಗೆಟ್ಟು ಕೂತಿದೆ. ತನ್ನ ಸಂಗಡಿಗರೊಂದಿಗೆ ಹನುಮನೂ ತಲೆಯ ಮೇಲೆ ಕೈಹೊತ್ತು ಕುಳಿತಿದ್ದಾನೆ. ಆಗ, ಹನುಮನಿಗೆ ಅವನ ನಿಜಶಕ್ತಿಯನ್ನು ಜಾಂಬವಂತ ಮನದಟ್ಟು ಮಾಡಿಸುತ್ತಾನೆ. ಜಾಂಬವಂತನ ಒತ್ತಾಸೆಯ ಮೇರೆಗೆ ಹನುಮಂತ ಬಹು ಸುಲಭವಾಗಿ ಸಾಗರೋಲ್ಲಂಘನ ಮಾಡಿ, ಲಂಕೆಯನ್ನು ತಲುಪಿ, ರಾಮ ರಾವಣರ ಯುದ್ಧಕ್ಕೆ ನಾಂದಿ ಹಾಡುತ್ತಾನೆ. ಸಾಗರ ಲಂಘಿಸಲೂ ಹನುಮನಿಗೆ ಶಕ್ತಿಯಾಗಿ ಪರಿಣಮಿಸುವುದು ರಾಮಭಕ್ತಿಯೇ. ಅಪಾರ ಸಾಮರ್ಥ್ಯವನ್ನುಳ್ಳ ಹನುಮಂತ ಸದ್ದು ಮಾಡದ ತುಂಬಿದ ಕೊಡದಂಥವನು.

ಭಕ್ತಿಗೂ ಶಕ್ತಿಗೂ ಹನುಮ ಸಂಕೇತ. ಆತ ಮಹಾನ್ ಜ್ಞಾನಿ. ಬಾಲಕನಿದ್ದಾಗ ತುಂಟನಾಗಿದ್ದ ಹನುಮ, ಸೂರ್ಯನನ್ನು ನುಂಗಲು ಮುಗಿಲಿಗೆ ಹಾರಿದ್ದ. ರಾಮನ ಭೇಟಿಯ ನಂತರದ ಹನುಮನದು ಬೇರೆಯದೇ ವ್ಯಕ್ತಿತ್ವ. ಅನಿವಾರ್ಯ ಸಂದರ್ಭದಲ್ಲಿ ಶಕ್ತಿ ಪ್ರದರ್ಶನ ಮಾಡಿದ್ದನ್ನು ಹೊರತುಪಡಿಸಿದರೆ, ಹನುಮನ ನಿಜಶಕ್ತಿ ಭಕ್ತಿಯೇ. ಹನುಮನಿಗೆ ಭಕ್ತಿ ಶಕ್ತಿಗಳೆರಡೂ 'ರಾಮಮಂತ್ರ'ವೇ. ಜನರ ಮನಸ್ಸಿನಲ್ಲಿ ಹನುಮ ಅಚ್ಚೊತ್ತಿರುವುದೂ ರಾಮಭಕ್ತನ ರೂಪದಲ್ಲೇ. ಆ ಕಾರಣದಿಂದಲೇ ಪಟ್ಟಾಭಿಷೇಕ ಸಂದರ್ಭದ 'ರಾಮ ಕುಟುಂಬ'ದಲ್ಲಿ ಹನುಮನಿಗೂ ಸ್ಥಾನವಿದೆ.

ಹನುಮ ಯೋಗಶಾಸ್ತ್ರದ ಪರಮ ರಹಸ್ಯಗಳನ್ನು ಅರಿತವನು. ಸಪ್ತ ಚಿರಂಜೀವಿಗಳಲ್ಲೊಬ್ಬ. ಬ್ರಹ್ಮಚಾರಿ, ಇಚ್ಛಾರೂಪಿ, ಮಹಾನ್ ಪಂಡಿತ, ವಯ್ಯಾಕರಣಿ, ಸಂಗೀತಶಾಸ್ತ್ರ ವಿಶಾರದ. 'ರಾಮಾಯಣ' ಕಾವ್ಯದ ಮೂಲಕ ನಮ್ಮೊಳಗೆ ಅಚ್ಚೊತ್ತಿರುವ ಹನುಮಂತನ ವಿಶೇಷಣಗಳಿವು. ವಾನರ ಕುಲಕ್ಕೆ ಸೇರಿದವನೆನ್ನುವುದು ಅವನನ್ನು ದೀನದಲಿತರಿಗೆ ಇನ್ನಷ್ಟು ಆಪ್ತನನ್ನಾಗಿಸಿದೆ.

ಹನುಮಂತ ತಾನು ರಚಿಸಿದ ರಾಮಾಯಣ ಕಾವ್ಯವನ್ನು ಹರಿದು ಹಾಕಿದಾಗ, ತನ್ನ ಕಾವ್ಯ ಒಂದು ಉತ್ಪನ್ನವಾಗಿದ್ದರೆ, ಹನುಮನ ಕಾವ್ಯ ಮಮತೆಯ ಕೃತಿಯಾಗಿದ್ದುದು ವಾಲ್ಮೀಕಿಯ ಅರಿವಿಗೆ ಬರುತ್ತದೆ. ಆಗ ವಾಲ್ಮೀಕಿ ಉದ್ಗರಿಸುವುದು: "ಹೇಗೆ ಇಂದ್ರಿಯಾಸಕ್ತಿಯು ನಮ್ಮ ಪ್ರಜ್ಞೆಯನ್ನು ಗಲಿಬಿಲಿಗೊಳಿಸುತ್ತದೆಯೋ ಹಾಗೆಯೇ ಶಬ್ದಗಳು ವಿಚಾರವನ್ನು ಗಲಿಬಿಲಿಗೊಳಿಸುತ್ತವೆ. ಈಗ ನನಗೆ ರಾಮನಿಗಿಂತ, 'ರಾಮ' ಎಂಬ ವಿಚಾರ ಬಹಳ ದೊಡ್ಡದು ಎಂದು ಮನವರಿಕೆಯಾಗಿದೆ."

ವಾಲ್ಮೀಕಿ ಅವರ ಮಾತುಗಳಲ್ಲಿನ ಎರಡು ಸಂಗತಿಗಳನ್ನು ಬಹು ಮುಖ್ಯವಾದವು. ಒಂದು, ರಾಮನಿಗಿಂತ, 'ರಾಮ' ಎಂಬ ವಿಚಾರ ಬಹಳ ದೊಡ್ಡದೆನ್ನುವುದು. ಮತ್ತೊಂದು, ಇಂದ್ರಿಯಾಸಕ್ತಿಯು ಪ್ರಜ್ಞೆಯನ್ನು ಗಲಿಬಿಲಿಗೊಳಿಸುವಂತೆ ಶಬ್ದಗಳು ವಿಚಾರವನ್ನು ಗಲಿಬಿಲಿಗೊಳಿಸುತ್ತವೆ ಎನ್ನುವುದು. ಈ ಮಾತುಗಳನ್ನು ಹನುಮಂತನಿಗೆ ಸಂಬಂಧಿಸಿದಂತೆ ವರ್ತಮಾನದ ವಿದ್ಯಮಾನಗಳ ಹಿನ್ನೆಲೆಯಲ್ಲಿ ಹೀಗೆ ಬದಲಿಸಿ ಹೇಳಬಹುದೆ: 'ಹನುಮ ಎನ್ನುವ ವಿಚಾರಕ್ಕಿಂತ ಹನುಮ ಎನ್ನುವ ಹೆಸರೇ ದೊಡ್ಡದು.

ವರ್ತಮಾನದ ಹನುಮಂತನ ಜನಪ್ರಿಯ ಚಿತ್ರ ಯಾವುದು? ಭಕ್ತಿಯ ಉತ್ತುಂಗದಲ್ಲಿ ಮುಳುಗಿದ ಅಥವಾ ರಾಮಧ್ಯಾನಮಗ್ನನಾದ ಹನುಮನ ಚಿತ್ರವೀಗ ಚಲಾವಣೆಯಲ್ಲಿಲ್ಲ. ಈಗ ಜನಪ್ರಿಯವಾಗಿರುವುದು, ರೇಖೆಗಳಲ್ಲಿ ಮೂಡಿರುವ ಕೋಪೋದ್ರಿಕ್ತ ಹನುಮ. ವಿಚಾರಕ್ಕಿಂತಲೂ ಸಂಕೇತಕ್ಕೆ ಜೋತು ಬಿದ್ದಾಗ ಮಾನವೀಯ ಭಕ್ತಿ ಹಿನ್ನೆಲೆಗೆ ಸರಿದು, ವಿಧ್ವಂಸಕ ರೌದ್ರಾವತಾರ ವಿಜೃಂಭಿಸುತ್ತದೆ. ಹನುಮಾನ್ ಚಾಲೀಸ ಬರಿಯ ಶಬ್ದರೂಪ ತಳೆದಾಗ ವಿಚಾರಗಳು ಗಲಿಬಿಲಿಗೊಂಡು ಸವಕಲಾಗುತ್ತವೆ.

ರಾಮಾಯಣದಲ್ಲಿ, ಲಕ್ಷ್ಮಣನನ್ನು ಉಳಿಸಲು ಹನುಮ ಸಂಜೀವಿನಿ ಬೆಟ್ಟ ಹೊತ್ತು ತರುತ್ತಾನೆ. ಹನುಮನ ಕಾಲ ಅಪೇಕ್ಷಿಸಿದ್ದು ಜೀವವನ್ನುಳಿಸುವ ಮೂಲಿಕೆಯನ್ನು. ವಿಷಯಾಸಕ್ತಿ ಉತ್ತೇಜಿಸುವ ಮೂಲಿಕೆ ಹುಡುಕಲು ಹೊರಟು ಹಿಮಾಲಯದಲ್ಲಿ ಜೀವ ಕಳೆದುಕೊಳ್ಳುವುದು ಇಂದಿನ ಕಾಲದ ಪ್ರವೃತ್ತಿ. ಈ ವ್ಯತ್ಯಾಸದ ಕಾರಣದಿಂದಲೇ ರಾಮನನ್ನೂ ಹನುಮನನ್ನೂ ವಿಚಾರವಾಗಿ ಉಳಿಸಿಕೊಳ್ಳುವ ಬದಲು ಶಬ್ದಗಳಾಗಿ ಉಳಿಸಿಕೊಳ್ಳಲು ಹವಣಿಸುತ್ತಿದ್ದೇವೆ. ಸಂಜೀವಿನಿಯ ಜೀವಶಕ್ತಿಯ ಬದಲು, 'ಉದ್ರೇಕ'ದ ಮೂಲಿಕೆಗಾಗಿಯೇ ಹಾತೊರೆಯುವವರಿಗೆ ವಿಚಾರಕ್ಕಿಂತಲೂ 'ವಿಷಯ'ದ ವಿಷವೇ ಆಕರ್ಷಕ, ಲಾಭದಾಯಕ.

ಹಂಪಿಯ ಅಂಜನಾದ್ರಿ ಬೆಟ್ಟ ಆಂಜನೇಯನ ತವರು. ಆ ಬೆಟ್ಟದಲ್ಲೀಗಲೂ ಚಿರಂಜೀವಿಯಾದ ಹನುಮ, ರಾಮಮಂತ್ರವನ್ನು ಜಪಿಸುತ್ತ ಧ್ಯಾನದಲ್ಲಿ ಮುಳುಗಿರಬಹುದೆ? ಬೆಟ್ಟದಲ್ಲಿ ಮೂಡುವ ಹೆಜ್ಜೆಗಳು, ಜಯಘೋಷಗಳು ಹನುಮಂತನ ಧ್ಯಾನವನ್ನು ಭಂಗಗೊಳಿಸುವುದಿಲ್ಲವೆ? ಅಥವಾ, ಹನುಮಂತನನ್ನು ಒಕ್ಕಲೆಬ್ಬಿಸಲಿಕ್ಕಾಗಿಯೇ ಇದೆಲ್ಲ ಅಬ್ಬರವೇ?

■ **ಚಂಪಕಮಾಲಾ**

## ಮಾತೇ ಮುತ್ತು

- ನಿಮ್ಮ ವೈರಿ ತಪ್ಪು ಮಾಡುತ್ತಿದ್ದಲ್ಲಿ ಎಂದಿಗೂ ಅವನನ್ನು ಅಡ್ಡಿಪಡಿಸಬೇಡಿ.

  –ನೆಪೊಲಿಯನ್ ಬೊನಾಪಾರ್ಟೆ

- ಅರಸನಾದವನು ಆಳಬೇಕು; ಅಳಬಾರದು. ಅಳೋ ಸಮಯ ಬಂದರೂ ಅದು ಮಾನಸಿಕವಾಗಿರಬೇಕು. ಕಣ್ಣಲ್ಲಿ, ಮುಖದಲ್ಲಿ ಕಾಣಬಾರದು.

  –ತರಾಸು

- ಸ್ನೇಹಿತ ನಿಸರ್ಗ ಕೊಟ್ಟಿರುವ ಸೋದರ. ಸ್ನೇಹಿತರನ್ನು ಹೊಂದಿರುವವರೇ ನಿಜವಾಗಿ ಧನ್ಯರು.

  –ನಿರಂಜನ

- ನಿಮಗೆ ಇಷ್ಟವಾಗದ ವಿಚಾರಗಳನ್ನು ಬದಲಿಸಿ ಜಡವಾಗಿರಲು ನೀವು ಮರವಲ್ಲ.

  –ಜಿಮ್ ರೋನ್

- ನೀತಿ ಎಂಬುದು ಸಾಧಿಸಬೇಕಾದ ಧರ್ಮವೇ ಹೊರತು ಸಹಜವಾದ ಗುಣವಲ್ಲ.

  –ರಾಳ್ಳಪಲ್ಲಿ ಅನಂತಕೃಷ್ಣ ಶರ್ಮ

- ಒಳ್ಳೆತನ ಸಹಜವೇನಲ್ಲ, ಒಳ್ಳೆತನ ಅಸಹಜವೂ ಅಲ್ಲ.

  –ಗೋಪಾಲ ಕೃಷ್ಣ ಅಡಿಗ

- ಇಂದು ಮಿತಿಮೀರಿದ ಆಸೆಯೇ ಜಗತ್ತಿನ ಜೀವನವನ್ನೆಲ್ಲಾ ರೂಪಿಸುತ್ತಿದೆ.

  –ಸಿಂಪಿ ಲಿಂಗಣ್ಣ